ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಆವರಣ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018. ದೂರವಾಣಿ: 080-26701303

## ೨೮.೦೨.೨೦೧೨ರಂದು ನಡೆದ 'ಹಣಕಾಸು ಸಮಿತಿ' ೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ ೩ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ ೨೮, ೨೦೧೨ರ ಮಂಗಳವಾರ ಬೆಳಿಗ್ಗೆ ೧೧.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| 1. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಕುಲಪತಿಗಳು ಹಾಗೂ ಹಣಕಾಸು ಅಧಿಕಾರಿಗಳು | ಅಧ್ಯಕ್ಷರು |
| 2. | **ಶ್ರೀ ಬಿ.ಎಸ್. ಜಾಪಾಲಿ,** ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 3. | **ಪ್ರೊ. ಎನ್. ಅಶ್ವತ್ಥಮ್ಮ,** ಪ್ರಶಾಸನ ಸಭೆ ಸದಸ್ಯರು | ಸದಸ್ಯರು |
| 4. | **ವಿದ್ವಾನ್ ಸಿ. ನಂಜುಂಡಯ್ಯ,** ಪ್ರಶಿಕ್ಷಣ ಪರಿಷತ್ ಸದಸ್ಯರು | ಸದಸ್ಯರು |

ಗೈರುಹಾಜರಿ:

| | | |
|---|---|---|
| 1. | **ಪ್ರಧಾನ ಕಾರ್ಯದರ್ಶಿ,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

ವಿಷಯ1: **2011-12ನೇ ಸಾಲಿನ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳ ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರಗಳ ಬಗೆಗೆ**

ಟಿಪ್ಪಣಿ: 2011ರ ಸೆಪ್ಟೆಂಬರ್ ಅಂತ್ಯಕ್ಕೆ **ರೂ. 5,40,97,386/-** (ರೂಪಾಯಿ ಐದು ಕೋಟಿ ನಲವತ್ತು ಲಕ್ಷದ ತೊಂಭತ್ತೇಳು ಸಾವಿರದ ಮೂರು ನೂರ ಎಂಭತ್ತಾರು ಮಾತ್ರ)ಗಳು ಉಳಿದಿತ್ತು. 2011-12ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನ, ಸ್ಪರ್ಧೆಗಳು-ವಿಚಾರಸಂಕಿರಣ ನಡೆಸಲು ಅನುದಾನ ಮತ್ತು ಅಕ್ಟೋಬರ್, ನವೆಂಬರ್, ಮತ್ತು ಡಿಸೆಂಬರ್ ತಿಂಗಳುಗಳ ತ್ರೈಮಾಸಿಕ ಕಂತಿನ ಅನುದಾನಿತ ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳ ಬೋಧಕ-ಬೋಧಕೇತರ ಸಿಬ್ಬಂದಿಗಳ ವೇತನಾನುದಾನ ಸೇರಿದಂತೆ **ರೂ. 4,13,12,000/-** ಬಿಡುಗಡೆ ಆಯಿತು. ಜೊತೆಗೆ ಬ್ಯಾಂಕಿನ ಉಳಿತಾಯ ಮೊತ್ತದ ಬಡ್ಡಿಹಣ, ತ್ರೈಮಾಸಿಕ ಪತ್ರಿಕೆಯ ಚಂದಾಹಣ, ನೋಂದಣಿ ಶುಲ್ಕ, ವಿದ್ಯಾರ್ಥಿವೇತನದ ಅನುದಾನ, ಮೌಲ್ಯಮಾಪಕರ ನೋಂದಣಿ ಶುಲ್ಕ, ಮಾನ್ಯತೆ ನವೀಕರಣ ಶುಲ್ಕ ಮತ್ತು ಇತರೆ ಮೂಲಗಳ ಆದಾಯ ಸೇರಿದಂತೆ ಒಟ್ಟು **ರೂ. 18,93,207/-** ವಿಶ್ವವಿದ್ಯಾಲಯಕ್ಕೆ ಸಂದಾಯವಾಯಿತು. 2011ನೇ ಡಿಸೆಂಬರ್ ತಿಂಗಳವರೆಗೆ ಪಾವತಿಸಬೇಕಿದ್ದ ವಿಶ್ವವಿದ್ಯಾಲಯದ ಅಧಿಕಾರಿಗಳ ವೇತನದ (ಪಿಟಿ/ಟಿಡಿಎಸ್/ಇಜಿಐಎಸ್/ಇತರೆ) ಕಡಿತಗಳು, ಪಿಂಚಣಿ ನಿಧಿ, ಕೆಜಿಐಡಿ, ವೇತನ ಪಾವತಿ ಬಾಕಿ ಸೇರಿದಂತೆ **ರೂ. 6,11,131/-**ಗಳು ಪಾವತಿಸಬೇಕಾದ ಮೊತ್ತ ವಿಶ್ವವಿದ್ಯಾಲಯದ ಬಳಿಯಿದೆ. ಹೀಗೆ ಒಟ್ಟಾರೆ 2011-12ನೇ ಸಾಲಿನ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳ ತ್ರೈಮಾಸಿಕದಲ್ಲಿ ಒಟ್ಟು **ರೂ. 9,79,13,724/-** (ಒಂಭತ್ತು ಕೋಟಿ ಎಪ್ಪತ್ತೊಂಭತ್ತು ಲಕ್ಷದ ಹದಿಮೂರು ಸಾವಿರದ ಏಳುನೂರ ಇಪ್ಪತ್ತನಾಲ್ಕು ಮಾತ್ರ) ವಿಶ್ವವಿದ್ಯಾಲಯಕ್ಕೆ ಲಭ್ಯವಾಗಿದೆ.

ಈ ಮೊತ್ತದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ಕುಲಪತಿಗಳ ಆಪ್ತಕಾರ್ಯದರ್ಶಿ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ವೇತನ ಹಾಗೂ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಿಗೆ ಅನುದಾನಿತ ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳ ಬೋಧಕ-ಬೋಧಕೇತರ ಸಿಬ್ಬಂದಿಗಳ ವೇತನ, ಹೊರಗುತ್ತಿಗೆ ಸಿಬ್ಬಂದಿಗಳ ವೇತನ, ಘಟಕ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರ ವೇತನ, ಸಂದರ್ಶಕ ಪ್ರಾಧ್ಯಾಪಕರ ವೇತನ ಮತ್ತು ಸೆಕ್ಯೂರಿಟಿ ವೇತನ ಸೇರಿದಂತೆ **ರೂ. 3,62,86,631/-** (ರೂಪಾಯಿ ಮೂರು ಕೋಟಿ ಅರವತ್ತೆರಡು ಲಕ್ಷದ ಎಂಭತ್ತಾರು ಸಾವಿರದ ಆರುನೂರ ಮೂವತ್ತೊಂದು ಮಾತ್ರ)ಗಳನ್ನು ಪಾವತಿಸಲಾಗಿದೆ ಹಾಗೂ ವಿಶ್ವವಿದ್ಯಾಲಯ ಕಾರ್ಯಾಲಯದ ಅಭಿವೃದ್ಧಿ ಮತ್ತು ಇತರೆ ವೆಚ್ಚ(ಪೀಠೋಪಕರಣಗಳು-ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ, ಸ್ಪರ್ಧೆಗಳು, ಕಾರ್ಯಕ್ರಮಗಳು, ಶಿಬಿರಗಳು, ಸಭೆಗಳು, ಮುದ್ರಣ, ಪರೀಕ್ಷಾ ವೆಚ್ಚಗಳು, ವೃತ್ತಿಶುಲ್ಕ, ನಿರ್ವಹಣಾ ವೆಚ್ಚ, ಜಾಹಿರಾತು, ದೂರವಾಣಿ ವೆಚ್ಚ, ವಿದ್ಯುಚ್ಛಕ್ತಿ ವೆಚ್ಚ, ಕಾನೂನು ಸಲಹೆ, ವಾಹನದ ಬಾಡಿಗೆ, ಸಾದಿಲ್ವಾರು, ಪಿಂಚಣಿ ನಿಧಿ, ವೃತ್ತಿ ತೆರಿಗೆ - ಇತರೆ ಕಡಿತಗಳು, ಘಟಕ ಕಾಲೇಜುಗಳ ಸಾದಿಲ್ವಾರು, ಇತ್ಯಾದಿ)ಗಾಗಿ **ರೂ. 25,24,298/-** (ರೂಪಾಯಿ ಇಪ್ಪತ್ತೈದು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಎರಡು ನೂರ ತೊಂಭತ್ತೆಂಟು ಮಾತ್ರ)ಗಳನ್ನು ಖರ್ಚು ಮಾಡಲಾಗಿದೆ.

2011ರ ಡಿಸೆಂಬರ್ ಅಂತ್ಯಕ್ಕೆ **ರೂ. 5,91,02,795/–** (ರೂಪಾಯಿ ಐದು ಕೋಟಿ ತೊಂಭತ್ತೊಂದು ಲಕ್ಷದ ಎರಡು ಸಾವಿರದ ಏಳು ನೂರ ತೊಂಭತ್ತೈದು ಮಾತ್ರ)ಗಳು ಉಳಿದಿರುತ್ತವೆ. ಇದಕ್ಕೆ ಸಂಬಂಧಿಸಿದ ವಿವರಗಳು ಕೆಳಕಂಡಂತಿವೆ:

**01.10.2011ರಿಂದ 31.12.2011ಕ್ಕೆ ಕೊನೆಗೊಳ್ಳುವ ಸ್ವೀಕೃತಿ ಮತ್ತು ಪಾವತಿ**

| **RECEIPTS** | **AMOUNT** | **PAYMENT** | **AMOUNT** |
|---|---|---|---|
| Opening Balance | 5427.00 | Fixed Assets | |
| State Bank Of Mysore-CA-475 | 45382058.00 | Furnitures and Fixtures | 52044.00 |
| (Vice-Chancellor, KSU) | | | |
| State Bank Of Mysore - SB-360 | 8709901.00 | | |
| (Finance Officer, KSU) | | | |
| | | Loans and Advance | |
| GRANT RECEIVED | 31062000.00 | State Level Compitation | 930688.00 |
| Govt Grant Received | 10250000.00 | | |
| Indirect Incomes | | Examination Expenses | 16726.00 |
| Interest on S/B a/c | 1036615.00 | Salary to College and School | 34379442.00 |
| Other Income | 1502.00 | Advertisement | 10000.00 |
| Quaterly Magazine Fee | 22200.00 | Bank Charges | 938.00 |
| Registration Fee | 5000.00 | Pension Expenses | 133378.00 |
| Scholar Ship Amt Received | 800950.00 | Electricity Charges | 5573.00 |
| Valuators Registration Fee | 16940.00 | Function Expenses | 9250.00 |
| Renewal Fees | 10000.00 | Holiday Allowances | 135075.00 |
| | | Inspection Expenses | 8254.00 |
| | | Legal Adviser | 29000.00 |
| | | Meeting Expenses | 91098.00 |
| Current Liabilities | | Office Expenses | 26860.00 |
| EGIS Payable | 1700.00 | Outsources Salary | 189659.00 |
| P Tax on Salary Payable | 3400.00 | Petrol and Diseal Exp | 36000.00 |
| TDS on Contract Payable | 3794.00 | Printing and Stationary | 143116.00 |
| TDS on Salary Payable | 216000.00 | Proffessional Charges | 26370.00 |
| TDS on Security | 984.00 | Repairs and Maintances | 49309.00 |
| Pension Fund | 20720.00 | Salary (VC, Registrar, Director, P.S.) | 1617628.00 |
| KGID | 15000.00 | Security Salary | 49152.00 |
| Other Deduction | 41496.00 | Ta/Da | 25312.00 |
| Salary Payable | 308037.00 | Telephone Charges | 35540.00 |
| | | University Work Shop | 65453.00 |
| | | Vehicle hiring charges | 63835.00 |
| | | Book Royalties Expenses | 12500.00 |
| | | Building Maintenance | 31424.00 |
| | | Constituent Collage-Guest lecture Fee | 20750.00 |
| | | Constituent Collage-Office Expenses | 129900.00 |
| | | Visiting Professor | 30000.00 |
| | | Pension Fund | 40990.00 |
| | | P Tax on Salary Payable | 2400.00 |
| | | TDS on Contract Payable | 4143.00 |
| | | TDS on Salary Payable | 378000.00 |
| | | Other Deduction | 31122.00 |
| | | Closing Balance | |
| | | Cash On hand | 7300.00 |
| | | State Bank Of Mysore-CA-475 | 50723768.00 |
| | | State Bank Of Mysore - SB-360 | 8371727.00 |
| **TOTAL** | **97913724.00** | **TOTAL** | **97913724.00** |

ನಿರ್ಣಯ: **2011–12ನೇ ಸಾಲಿನ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳ ಜಮಾ ಮತ್ತು ಖರ್ಚುಗಳನ್ನು ಸಭೆಯು ಸಂಪೂರ್ಣವಾಗಿ ಪರಿಶೀಲಿಸಿ ವೆಚ್ಚಗಳಿಗೆ ಒಪ್ಪಿಗೆಯನ್ನು ಸೂಚಿಸಿತು.**

**ವಿಷಯ 2: ವೃಂದ ಮತ್ತು ನೇಮಕಾತಿ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011ರಂದು ಒಟ್ಟು 133 ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ. ಅದರಂತೆ ಯುಜಿಸಿ ಹಾಗೂ ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವ ಕೆಲವು ನಿಯಮಗಳನ್ನು ಸೇರ್ಪಡೆ ಮಾಡಿ ದಿನಾಂಕ: **17.06.2011**ರಂದು ಪ್ರಶಾಸನ ಸಮಿತಿ ಹಾಗೂ ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿದ್ಧಪಡಿಸಿ ಕಳುಹಿಸಲಾಗಿತ್ತು. ಈ ಪರಿನಿಯಮವು ಹಣಕಾಸು ಇಲಾಖೆ, ಸಿಬ್ಬಂದಿ ಆಡಳಿತ ಮತ್ತು ಸುಧಾರಣಾ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅನುಮೋದನೆಯನ್ನು ಪಡೆದು ಅಂಕಿತಕ್ಕಾಗಿ ರಾಜ್ಯಪಾಲರ ಕಾರ್ಯಾಲಯಕ್ಕೆ ಕಳುಹಿಸಿತ್ತು. ದಿನಾಂಕ: 16.02.2012ರಂದು ಉನ್ನತ ಶಿಕ್ಷಣ ಇಲಾಖೆಯು ಪತ್ರ ಬರೆದು ಹಣಕಾಸು ಸಮಿತಿ, ಪ್ರಶಿಕ್ಷಣ ಪರಿಷತ್ತು ಮತ್ತು ಪ್ರಶಾಸನ ಸಮಿತಿಯಲ್ಲಿ ಅನುಮೋದನೆ ಪಡೆದು ಕಳುಹಿಸಲು ಈಗ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಪರಿನಿಯಮವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವೃಂದ ಮತ್ತು ನೇಮಕಾತಿ ಪರಿನಿಯಮವನ್ನು ಪರಿಶೀಲಿಸಿತು. ಬೋಧಕ–ಬೋಧಕೇತರ ಹುದ್ದೆಗಳಿಗೆ ನಿಯಮಿಸಿರುವ ನಿಯಮಾವಳಿಗಳನ್ನು ಆಮೂಲಾಗ್ರವಾಗಿ ಚರ್ಚಿಸಿತು. 'ಡಿ' ಮತ್ತು ಕೆಲವೊಂದು ಬೋಧಕೇತರ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಹುದ್ದೆಗಳಿಗೂ ಸಂಸ್ಕೃತಜ್ಞಾನ ಅವಶ್ಯವೆಂದು ಅಭಿಪ್ರಾಯಪಟ್ಟು ಪರಿನಿಯಮಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು ಹಾಗೂ ಹಣಕಾಸು ಅಧಿಕಾರಿಗಳು